# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಗುಬ್ಬಿ

**ದಿನಾಂಕಃ 09.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| | ಸತ್ಯ ಪ್ರತಿಜ್ಞೆಯ ಮೇರೆಗೆ |

## ಪಾಟೀ ಸವಾಲುಃ-ಪ್ರತಿವಾದಿ ಪರ ವಕೀಲರಾದ ಶ್ರೀ. ಸಿ ಆರ್ ಬಿ ರವರಿಂದ

ನಿಮ್ಮ ತಂದೆಯ ಹೆಸರು ಏನು ಎಂದರೆ ಲಕ್ಷ್ಮೀನಾರಾಯಣಪ್ಪ ಎಂದು ನುಡಿಯುತ್ತಾರೆ. ನಿಮ್ಮ ತಂದೆ ತೀರಿಕೊಂಡು ಎಷ್ಟು ವರ್ಷ ಆಗಿರುತ್ತದೆ ಎಂದರೆ 30 ವರ್ಷ ಅಗಿರುತ್ತದೆ ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿನ ಅಂಶಗಳೆಲ್ಲಾ ಗೊತ್ತಾ ಎಂದರೆ ಗೊತ್ತು ಎಂದು ನುಡಿಯುತ್ತಾರೆ. ನಿಮ್ಮ ತಂದೆ ಯಾವ ಆಸ್ತಿಯ ಮಾಲೀಕರಾಗಿದ್ದರು ಎಂದು ಹೇಳಲು ಅಗುತ್ತದಾ ಎಂದರೆ ಸಾಕ್ಷಿಯು ಕಾನಿಷ್ಮಾರಿ ನಂ.686 ಎಂದು ನುಡಿಯುತ್ತಾರೆ. ಆ ಅಸ್ತಿ ನಿವೇಶನವಾಗಿರುತ್ತದಾ ಅಥವಾ ಏನು ಆಸ್ತಿ ಎಂದರೆ ಖಾಲಿ ನಿವೇಶನ ಎಂದು ನುಡಿಯುತ್ತಾರೆ. ಪೂರ್ವ ಪಶ್ಚಿಮ ಮತ್ತು ಉತ್ತರ ದಕ್ಷಿಣ ವಿಸ್ತೀರ್ಣ ಏನು ಎಂದರೆ ಸಾಕ್ಷಿಯು ಪೂರ್ವ ಪಶ್ಚಿಮ –45 ಅಡಿ, ಉತ್ತರ ದಕ್ಷಿಣ 30 ಅಡಿ ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ಪೂರ್ವ ಮತ್ತು ಪಶ್ಚಿಮದ ಚಕ್ಕುಬಂದಿ ಏನು ಎಂದರೆ ಪೂರ್ವಕ್ಕೆ ಸಿರಾ ನಲ್ಲಿಗೆರೆ ರಸ್ತೆ, ಪಶ್ಚಿಮಕ್ಕೆ – ಪಂಚಾಯಿತಿ ರಸ್ತೆ ಎಂದು ನುಡಿಯುತ್ತಾರೆ. ಸಿರಾ ನಲ್ಲಿಗೆರೆ ರಸ್ತೆ ಮತ್ತು ಪಂಚಾಯಿತಿ ರಸ್ತೆಯ ನಡುವೆ ಎಷ್ಟು ವಿಸ್ತೀರ್ಣದ ಜಾಗ ಇರುತ್ತದೆ ಎಂದರೆ 200 ಅಡಿ ಎಂದು ನುಡಿಯುತ್ತಾರೆ. ಪೂರ್ವ ಪಶ್ಚಿಮ 200 ಅಡಿ ಉದ್ದದ ಕಾನಿಷ್ಮಾರಿ ನಂಬರ್ ಏನು ಎಂದರೆ 686 ಎಂದು ನುಡಿಯುತ್ತಾರೆ. ಸದರಿ ಕಾನಿಷ್ಮಾರಿ ನಂಬರ್ 686 ಪೂರ್ತಿ ಆಸ್ತಿ ಯಾರಿಗೆ ಸೇರಿದ್ದು

ಎಂದರೆ ನಮಗೆ ಸೇರಿದ್ದು ಎಂದು ನುಡಿಯುತ್ತಾರೆ. ಸದರಿ ಕಾನಿಷ್ಮಾರಿ ನಂಬರ್.686 ರ ಪೂರ್ತಿ ಉತ್ತರ ದಕ್ಷಿಣ ಎಷ್ಟು ಎಂದರೆ ಸಾಕ್ಷಿಯು 100 ಅಡಿ ಎಂದು ನುಡಿಯುತ್ತಾರೆ. ಉತ್ತರ ದಕ್ಷಿಣ ಒಟ್ಟಾಗಿ 100 ಇಲ್ಲದೇ ಇದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಉತ್ತರ ದಕ್ಷಿಣ 100 ಅಡಿ ಇದೆ ಎಂದು ತೋರಿಸುವ ಯಾವುದಾದರೂ ದಾಖಲಾತಿಗಳನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಉತ್ತರ ದಕ್ಷಿಣ 25 ಅಡಿ ಇರುತ್ತದೆ ಎಂದರೆ ಸರಿಯಲ್ಲ. ಕಾನಿಷ್ಮಾರಿ ನಂಬರ್.686 ರ ಉತ್ತರ ದಕ್ಷಿಣ 25 ಅಡಿಯ ಉತ್ತರಕ್ಕೆ ಕುಲ್ಮೆ ತಿಮ್ಮಯ್ಯ ರವರ ನಿವೇಶನ ಇರುತ್ತದೆ ಎಂದರೆ ಸಾಕ್ಷಿಯು ಇದೆ ಅವರಿಗೆ ನಾವೇ ಜಾಗವನ್ನು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಕುಲ್ಮೆ ತಿಮ್ಮಯ್ಯ ರವರ ಆಸ್ತಿಯು ಮೊದಲು ನಿಮಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ತಾತ ಪಂಚಾಯಿತಿ ಮೂಲಕ ಅವರಿಗೆ ಭಾಗ ಮಾಡಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ಆ ಪತ್ರ ನಮ್ಮ ಬಳಿ ಇರುತ್ತದೆ ಎಂದು ನುಡಿಯುತ್ತಾರೆ. ಈ ಬಗ್ಗೆ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಕುಲ್ಮೆ ತಿಮ್ಮಯ್ಯ ರವರಿಗೆ ಮಾರಾಟ ಮಾಡಿದ ವ್ಯಕ್ತಿ ಬೇರೆ ಇರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ಊರಿನಲ್ಲಿ ಚತ್ರದ ತಿಮ್ಮಪ್ಪ ಎನ್ನುವ ವ್ಯಕ್ತಿ ಇದ್ದರು ಎಂದರೆ ಸರಿ. ಅವರಿಗೆ ತಿರುಮಲಯ್ಯ ಎಂಬ ಮಗ ಇರುತ್ತಾರೆ ಎಂದರೆ ಸರಿ. ಸದರಿ ತಿರುಮಲಯ್ಯ ರವರಿಗೆ ಶಿವಣ್ಣ ಮತ್ತು ತಿಮ್ಮಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಸದರಿ ಶಿವಣ್ಣ ರವರ ಹೆಂಡತಿ ನಾರಾಯಣಮ್ಮ ಎಂದರೆ ಸರಿ. ಸದರಿ ನಾರಾಯಣಮ್ಮ ರವರನ್ನು ಈ ದಾವಾದ 1 ನೇ ಪ್ರತಿವಾದಿಯನ್ನಾಗಿ ಮಾಡಿದ್ದಾರೆ ಎಂದರೆ ಸರಿ. ತಿರುಮಲಯ್ಯ ರವರ ಮಗನಾದ ತಿಮ್ಮಪ್ಪ ರವರಿಗೆ ದೇವರಾಜು ಮತ್ತು ತಿರುಮಲಯ್ಯ ಎಂಬ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಆಗ ನಾವು ಹುಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಚತ್ರದ ತಿಮ್ಮಪ್ಪನ ಮಗ ತಿರುಮಲಯ್ಯ ರವರು ಕಾನಿಷ್ಮಾರಿ ನಂಬರ್.679 ಕ್ಕೆ ಮಾಲೀಕರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕಾನಿಷ್ಮಾರಿ ನಂಬರ್.679 ಕ್ಕೆ ಚಕ್ಕುಬಂದಿ ಪೂರ್ವಕ್ಕೆ ಸಿರಾ

ನಲ್ಲಿಗೆರೆ ರಸ್ತೆ ಎಂದರೆ ನನಗೆ ಗೊತ್ತಿಲ್ಲ. ಪಶ್ಚಿಮಕ್ಕೆ ಪಂಚಾಯಿತಿ ರಸ್ತೆ ಎಂದರೆ ಸರಿ. ಉತ್ತರಕ್ಕೆ – ಸರ್ಕಾರಿ ರಸ್ತೆ ಎಂದರೆ ಸರಿ, ದಕ್ಷಿಣಕ್ಕೆ –ಹಿಂದೆ ಭಾಸ್ಕರ ಶೆಟ್ಟಿ ರವರ ಆಸ್ತಿ ಇತ್ತು ಎಂದರೆ ಸರಿ. ಸದರಿ ಚಿತ್ರದ ತಿಮ್ಮಪ್ಪನ ಮಗ ತಿರುಮಲಯ್ಯ ರವರು ಕಾನಿಷ್ಮಾರಿ ನಂಬರ್.679 ರ ಪೂರ್ವ ಭಾಗದ ನಿವೇಶನವನ್ನು ಕುಲ್ಮೆ ತಿಮ್ಮಯ್ಯ ರವರಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಉಳಿಕೆ ಜಮೀನಿನಲ್ಲಿ ತಿರುಮಲಯ್ಯ ರವರು ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ಉಳಿಕೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ – ಕುಲ್ಮೆ ತಿಮ್ಮಯ್ಯ ರವರಿಗೆ ಮಾರಾಟ ಮಾಡಿದ ನಿವೇಶನ, ಪಶ್ಚಿಮಕ್ಕೆ – ಪಂಚಾಯಿತಿ ರಸ್ತೆ, ಉತ್ತರಕ್ಕೆ – ಪಂಚಾಯಿತಿಯ ಮಾದೇನಹಳ್ಳಿಗೆ ಹೋಗುವ ರಸ್ತೆ, ದಕ್ಷಿಣಕ್ಕೆ – ಭಾಸ್ಕರ ಶೆಟ್ಟಿ ರವರ ಜಮೀನು ಎಂದರೆ ಸಾಕ್ಷಿಯು ದಕ್ಷಿಣಕ್ಕೆ ಭಾಸ್ಕರ ಶೆಟ್ಟಿ ಮತ್ತು ಸೀನಾಶಟ್ಟಿರವರು ಇದ್ದರು, ಅದನ್ನು ರಂಗಸ್ವಾಮಯ್ಯ, ಭಾಸ್ಕರ ಶೆಟ್ಟಿ, ಸೀನಾ ಶೆಟ್ಟಿ, ರಂಗಸ್ವಾಮಯ್ಯ ರವರ ಮಗ ಲಕ್ಷ್ಮೀನಾರಾಯಣರವರು ಭಾಗ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. ಕುಲ್ಮೆ ತಿಮ್ಮಯ್ಯ ರವರ ದಕ್ಷಿಣಕ್ಕೆ ಭಾಸ್ಕರ ಶೆಟ್ಟಿ ರವರಿಂದ ನಿಮ್ಮ ತಂದೆಗೆ ಬಂದಿರುತ್ತದೆ ಎಂದು ಹೇಳಲಾದ ನಿವೇಶನ ಎಂದರೆ ಸರಿ. ಕುಲ್ಮೆ ತಿಮ್ಮಯ್ಯ ರವರ ನಿವೇಶನದ ದಕ್ಷಿಣಕ್ಕೆ ನಿಮ್ಮ ತಂದೆ ಪೂರ್ವ ಪಶ್ಚಿಮವಾಗಿ ನಿವೇಶನದ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. ನಿಮ್ಮ ತಂದೆಗೆ ಬಂದಿದ್ದ ಆಸ್ತಿಯಲ್ಲಿ ಪೂರ್ವ ಪಶ್ಚಿಮ –50 ಅಡಿ, ಉತ್ತರ ದಕ್ಷಿಣ–12 ವರೆ ಅಡಿ ನಿವೇಶನವನ್ನು ದಿಃ 20.10.1987 ರಲ್ಲಿ ಸಣ್ಣಂಜಯ್ಯ ರವರ ಮಗ ಚನ್ನಿಗರಾಯಪ್ಪ ರವರಿಗೆ ಮಾರಾಟ ಮಾಡಿದ್ದರು ಎಂದರೆ ಸಾಕ್ಷಿಯು ಪೂರ್ವದ ಭಾಗದ ಕಡೆ ಮಾರಾಟ ಮಾಡಿದ್ದರು ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರದಲ್ಲಿ ಉತ್ತರಕ್ಕೆ ಕುಲ್ಮೆ ತಿಮ್ಮಯ್ಯ ರವರ ನಿವೇಶನ ಎಂದು ಬರೆದಿರುತ್ತದೆ ಎಂದರೆ ಸರಿ. ಸದರಿ ಕುಲ್ಮೆ ತಿಮ್ಮಯ್ಯ ರವರ ನಿವೇಶನವೇ ತಿರುಮಲಯ್ಯ ರವರಿಂದ ಕೊಂಡುಕೊಂಡ ನಿವೇಶನ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರದ ದಕ್ಷಿಣಕ್ಕೆ ಕೃಷ್ಣಯ್ಯ ಶೆಟ್ಟಿ ರವರಿಗೆ ಕೊಟ್ಟಿರುವ ನಿವೇಶನ ಎಂದು ಬರೆದಿರುತ್ತದೆ ಎಂದರೆ ಸರಿ. ಅದರಲ್ಲಿ ಉತ್ತರ ದಕ್ಷಿಣದ 12 ವರೆ ಅಡಿ ವಿಸ್ತೀರ್ಣದ ನಿವೇಶನವನ್ನು ಚನ್ನಿಗರಾಯಪ್ಪ

ರವರಿಗೆ ಮಾರಾಟ ಮಾಡಿದ್ದೀರಿ ಎಂದರೆ ಸರಿ. ದಿಃ 20.10.1987 ಅದೇ ದಿನ ಚನ್ನಿಗರಾಯಪ್ಪ ರವರಿಗೆ ಮಾರಾಟ ಮಾಡಿದ ನಿವೇಶನದ ದಕ್ಷಿಣದ ಆಸ್ತಿಯನ್ನು ಕೃಷ್ಣಯ್ಯ ಶೆಟ್ಟಿ ರವರಿಗೆ ಮಾರಾಟ ಮಾಡಿದ್ದೀರಿ ಎಂದರೆ ಸರಿ. ಚನ್ನಿಗರಾಯಪ್ಪ ರವರಿಗೆ ಮಾರಾಟ ಮಾಡಿದ ನಿವೇಶನದ ಉತ್ತರಕ್ಕೆ ನಿಮ್ಮ ಯಾವುದೇ ನಿವೇಶನ ಇರಲಿಲ್ಲ ಎಂದರೆ ಸರಿ.

2. ನಂಜಮ್ಮ ರವರಿಗೆ ಎಷ್ಟನೇ ಇಸವಿಯಲ್ಲಿ ಕ್ರಯ ಪತ್ರ ಬರೆದುಕೊಟ್ಟಿದ್ದೀರಿ ಎಂದರೆ ಸಾಕ್ಷಿಯು ದಿಃ 20.05.1987 ಎಂದು ನುಡಿಯುತ್ತಾರೆ. ನಂಜಮ್ಮ ರವರಿಗೆ ಬರೆದುಕೊಟ್ಟಿರುವ ನಿವೇಶನಕ್ಕೆ ನಿಮ್ಮ ತಂದೆ ಮಾಲೀಕರಾಗಿರಲಿಲ್ಲ ಎಂದರೆ ಸರಿಯಲ್ಲ. ಆ ಜಾಗದ ಬಗ್ಗೆ ನಿಮ್ಮ ತಂದೆಯ ಹೆಸರಿನಲ್ಲಿ ಯಾವುದೇ ಪಂಚಾಯಿತಿ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜಾಗದ ಬಗ್ಗೆ ನಿಮ್ಮ ತಂದೆಯ ಹೆಸರಿನಲ್ಲಿ ಪಂಚಾಯಿತಿ ದಾಖಲಾತಿಗಳು ಇದ್ದವು ಎಂದು ತೋರಿಸುವ ದಾಖಲಾತಿಗಳನ್ನು ನಿಮ್ಮ ತಂದೆ ನಂಜಮ್ಮ ರವರಿಗೆ ಕೊಟ್ಟಿದ್ದಾರಾ ಎಂದರೆ Katha extract ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ನೀವು ಆ ರೀತಿ ಯಾವುದೇ ದಾಖಲಾತಿಗಳನ್ನು ನಂಜಮ್ಮ ರವರಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ಅವರು ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನೀವು ನಂಜಮ್ಮ ರವರಿಗೆ ಮಾರಾಟ ಮಾಡಿದ ಕಾನಿಷ್ಮಾರಿ ನಂಬರ್. 686 ಎಂದರೆ ಸರಿ. ನೀವು ಚನ್ನಿಗರಾಯಪ್ಪ ಮತ್ತು ಕೃಷ್ಣಯ್ಯ ಶೆಟ್ಟಿ ರವರಿಗೆ ಮಾರಾಟ ಮಾಡಿದ ಆಸ್ತಿಯ ಪಶ್ಚಿಮದ ಕಡೆಯ ಆಸ್ತಿಯನ್ನು ನಂಜಮ್ಮ ರವರಿಗೆ ಮಾರಾಟ ಮಾಡಿದ್ದೀರಿ ಎಂದರೆ ಸರಿಯಲ್ಲ. 1987 ರಲ್ಲಿ ನೀವು ಹುಟ್ಟಿರುತ್ತಿರಾ ಎಂದರೆ ಸಾಕ್ಷಿಯು ನಾನು ನೊಂದಾಣಾ ಅಧಿಕಾರಿಗಳ ಕಚೇರಿಗೆ ಹೋಗಿ ಸದರಿ ಕ್ರಯ ಪತ್ರಕ್ಕೆ ಸಹಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರಕ್ಕೆ ಯಾರೆಲ್ಲಾ ಸಹಿ ಮಾಡಿದ್ದೀರಿ ಎಂದರೆ ಸಾಕ್ಷಿಯು ನಾನು, ಕಾಂತರಾಜು, ಕೃಷ್ಣಮೂರ್ತಿ, ವಸಂತ ಕುಮಾರ್ ಸಹಿ ಮಾಡಿದ್ದೇವೆ ಎಂದು ನುಡಿಯುತ್ತಾರೆ. ನಿಮಗೆ ಈಗ ಎಷ್ಟು ವರ್ಷ ಎಂದರೆ 65 ವರ್ಷ ಎಂದು ನುಡಿಯುತ್ತಾರೆ. ಕ್ರಯದಾರರಾಗಿ ನಿಮ್ಮ ತಂದೆ

ಲಕ್ಷ್ಮೀನಾರಾಯಣಪ್ಪ ರವರು ಮಾತ್ರ ಸಹಿ ಮಾಡಿದ್ದಾರೆ ಎಂದರೆ ಅವರ ಹೆಸರಿನಲ್ಲಿ ಇತ್ತು, ಅವರು ಮಾಡಿದ್ದಾರೆ ಮಕ್ಕಳುಗಳಾದ ನಮ್ಮನ್ನು ಸಾಕ್ಷಿದಾರರಾಗಿ ಸಹಿ ಮಾಡಿಸಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರದಲ್ಲಿ ಉತ್ತರದ ಚಕ್ಕುಬಂದಿಯನ್ನು ತಪ್ಪಾಗಿ ಬರೆಸಿದ್ದೀರಿ ಎಂದರೆ ಸರಿಯಲ್ಲ. ನೀವು ನಂಜಮ್ಮ ರವರಿಗೆ ಮಾರಾಟ ಮಾಡಿರುವ ನಿವೇಶನದ ಕಾನಿಷ್ಮಾರಿ ನಂ.686 ಎಂದರೆ ಸರಿ. ಕಾನಿಷ್ಮಾರಿ ನಂ.686 ರ ಉತ್ತರಕ್ಕೆ ಕಾನಿಷ್ಮಾರಿ ನಂ.679 ರ ನಿವೇಶನ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 686 ರ ನಿವೇಶನ ಇರುತ್ತದೆ ಎಂದು ನುಡಿಯುತ್ತಾರೆ. ಕಾನಿಷ್ಮಾರಿ ನಂ.686 ರ ಉತ್ತರಕ್ಕೆ ಕಾನಿಷ್ಮಾರಿ ನಂ.679 ಮತ್ತು ಸದರಿ ಕಾನಿಷ್ಮಾರಿ ನಂ.679 ರ ಉತ್ತರಕ್ಕೆ ಮಾದೇನಹಳ್ಳಿಗೆ ಹೋಗುವ ರಸ್ತೆ ಎಂದರೆ ಸರಿಯಲ್ಲ. ಮಾದೇನಹಳ್ಳಿಯ ರಸ್ತೆಯ ಪಕ್ಕದಲ್ಲಿ ನಿಮ್ಮ ಯಾವುದೇ ನಿವೇಶನ ಇರುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು 100 ಅಡಿ ನಂಜಮ್ಮ ರವರಿಗೆ ಮಾರಾಟ ಮಾಡಿದ್ದು ಉಳಿಕೆ ಆಸ್ತಿ ನಮ್ಮ ಹೆಸರಿನಲ್ಲಿಯೇ ಇರುತ್ತದೆ ಆ ಅಸ್ತಿಗೆ ಸಂಬಂಧಿಸಿದಂತೆ ನಾವು ಇ-ಖಾತಾ ಕೂಡ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ.

3.ನಿಮ್ಮ ತಂದೆ ಬರೆದುಕೊಟ್ಟ ಕ್ರಯ ಪತ್ರದ ಆಧಾರದ ಮೇಲೆ ನಂಜಮ್ಮ ರವರ ಹೆಸರಿಗೆ ಖಾತೆ ಆಗಲಿಲ್ಲ ಎಂದರೆ ಸಾಕ್ಷಿಯು ಖಾತೆ ಮಾಡಿಕೊಂಡಿದ್ದೇವೆ ಎಂದು ನಮಗೆ ಹೇಳಿದ್ದರು ಎಂದು ನುಡಿಯುತ್ತಾರೆ. ನಂಜಮ್ಮ ರವರು ಖಾತೆ ಮಾಡಿಸಿಕೊಳ್ಳಲು ಹೋದಾಗ ಚಕ್ಕುಬಂದಿ ತಪ್ಪಿದೆ ಎಂದು ಹೇಳಿ ಪಂಚಯಿತಿ ರವರು ಖಾತೆ ಮಾಡಿರುವುದಿಲ್ಲ ಎಂದರೆ ನಮ್ಮ ಗಮನಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಯಾವಾಗ ಖಾತೆ ಮಾಡಲು ಆಗುವುದಿಲ್ಲ ಎಂದು ಹೇಳಿದಾಗ ನಂಜಮ್ಮ ರವರು ಸ್ಥಳ ತನಿಖೆ ಮಾಡಿ ಖಾತೆ ಮಾಡಿಕೊಡಿ ಎಂದು ಪಂಚಾಯಿತಿಗೆ ಅರ್ಜಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯ ಆಧಾರದ ಮೇಲೆ ಪಿ ಡಿ ಒ ರವರು ಸ್ಥಳ ತನಿಖೆ ಮಾಡಿ ಅವರು ಕೊಟ್ಟಿರುವ ಚಕ್ಕುಬಂದಿ ತಾಳೆ ಬರುವುದಿಲ್ಲ ಎಂದು ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪಿ ಡಿ ಒ ರವರು ಸ್ಥಳ ತನಿಖೆ ಮಾಡಿದಾಗ ನಂಜಮ್ಮ ರವರು ಕೊಂಡಿರುವ ನಿವೇಶನವು ನಾರಾಯಣಮ್ಮ ರವರ

ದಕ್ಷಿಣಕ್ಕೆ ಬರುತ್ತದೆ ಎಂದು ತಿಳಿದು ಬಂದಿರುತ್ತದೆ ಎಂದರೆ ನನ್ನ ಗಮನಕ್ಕೆ ತಂದಿಲ್ಲ ಎಂದು ನುಡಿಯುತ್ತಾರೆ. ಈ ವಿಚಾರವನ್ನು ಪಿ ಡಿ ಒ ರವರು ಪಂಚಾಯಿತಿ ಸಭೆಯಲ್ಲಿಯೂ ಕೂಡ ಮಂಡಿಸಿ ನಂಜಮ್ಮ ರವರು ಅರ್ಜಿ ನೀಡಿದ್ದು ಸ್ಥಳ ಪರಿಶೀಲಿಸಿದಾಗ ಚಕ್ಕುಬಂದಿ ತಾಳೆ ಬಂದಿರುವುದಿಲ್ಲ ಎಂದು ಪಂಚಾಯಿತಿ ಸಭೆಯಲ್ಲಿ ತಿಳಿಸಿದ್ದರು ಎಂದರೆ ನನ್ನ ಗಮನಕ್ಕೆ ತಂದಿರುವುದಿಲ್ಲ, ಯಾವುದೇ ನೋಟೀಸ್ ಅನ್ನು ನನಗೆ ನೀಡಿಲ್ಲ ಎಂದು ನುಡಿಯುತ್ತಾರೆ. ನಂಜಮ್ಮ ರವರು ಕೊಂಡಿರುವ ಆಸ್ತಿಯು ನಾರಾಯಣಮ್ಮ ರವರ ನಿವೇಶನದ ದಕ್ಷಿಣಕ್ಕೆ ಬರುತ್ತಿರುವುದರಿಂದ ಸದರಿ ಆಸ್ತಿಗೆ ಖಾತೆ ಮಾಡಲು ನಂಜಮ್ಮ ರವರು ಒಪ್ಪಿಕೊಂಡಿದ್ದಾರೆ ಎಂದು ಹೇಳಿ ನಾರಾಯಣಮ್ಮ ರವರ ನಿವೇಶನದ ದಕ್ಷಿಣದ ಆಸ್ತಿಯನ್ನು ನಂಜಮ್ಮ ರವರಿಗೆ ಪಂಚಾಯಿತಿ ರವರು ಖಾತೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾರಾಯಣಮ್ಮ ರವರ ಪಕ್ಕದ ನಿವೇಶನಕ್ಕೆ ವಾದಿಯ ಹೆಸರಿಗೆ ಈಗ ಇ-ಖಾತೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲದಂತೆ ನಂಜಮ್ಮ ರವರು ಆ ಆಸ್ತಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನೀವು ಯಾವ ಚಕ್ಕುಬಂದಿಯ ಆಸ್ತಿಯನ್ನು ನಂಜಮ್ಮ ರವರಿಗೆ ಮಾರಾಟ ಮಾಡಿದ್ದೀರೋ ಆ ಚಕ್ಕುಬಂದಿಯ ಆಸ್ತಿಗೆ ಅವರು ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. ನಾರಾಯಣಮ್ಮ ರವರು ನಂಜಮ್ಮ ರವರ ಆಸ್ತಿಯ ಉತ್ತರಕ್ಕೆ ಇರುವ ತನ್ನ ನಿವೇಶನವನ್ನು 2 ನೇ ಪ್ರತಿವಾದಿ ಮಂಜುಳಾ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನಾರಾಯಣಮ್ಮ ರವರಿಗೆ ನಾವು ಒಂದೇ ನಿವೇಶನವನ್ನು ಮಾರಾಟ ಮಾಡಿದ್ದೆವು, ಉಳಿಕೆ ಜಮೀನು ನಮ್ಮದು ಇರುತ್ತದೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಗೆ ನಾರಾಯಣಮ್ಮ ರವರ ಮಾರಾಟ ಮಾಡಿದ ಆಸ್ತಿಯ ಇ-ಖಾತೆ 2 ನೇ ಪ್ರತಿವಾದಿಯ ಹೆಸರಿನಲ್ಲಿಯೇ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತಿನ ಮೇಲೆ ನಂಜಮ್ಮ ರವರಿಗೆ ಯಾವುದೇ ಹಕ್ಕು, ಭಾಧ್ಯತೆ ಮತ್ತು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ಏನು ಆಸ್ತಿಯನ್ನು ನೀಡಿದ್ದೀರೋ ಆ ಆಸ್ತಿಗೆ ಪಂಚಾಯಿತಿ ರವರು ನಂಜಮ್ಮ ರವರ ಹೆಸರಿಗೆ ಖಾತೆಯನ್ನು ಮಾಡಿಕೊಟ್ಟಿದ್ದು, ಆ ಆಸ್ತಿಯಲ್ಲಿಯೇ ನಂಜಮ್ಮ ರವರು ಸ್ವಾಧೀನದಲ್ಲಿ

ಇದ್ದಾರೆ ಎಂದರೆ ಸರಿ. ರಸ್ತೆಯ ಪಕ್ಕದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಂಜಮ್ಮ ರವರು ಈ ಸುಳ್ಳು ದಾವಾ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಂಜಮ್ಮ ರವರು ಯಾವ ಊರಿನಲ್ಲಿ ಇದ್ದಾರೆ ಎಂದರೆ ಮಾರನಹಳ್ಳಿ ಎಂದು ನುಡಿಯುತ್ತಾರೆ. ನಂಜಮ್ಮ ರವರು ಆರೋಗ್ಯವಾಗಿದ್ದಾರಾ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೀವು ನಂಜಮ್ಮ ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**.

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ.

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.